ಸಾಕ್ಷಿಯನ್ನು ದಿಃ03.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಎಸ್ ಜಿ ವಕೀಲರಿಂದಃ-**

ನನಗೆ ಒಟ್ಟು 4 ಜನ ಮಕ್ಕಳು. ಮೂರು ಜನ ಗಂಡು ಮಕ್ಕಳು. ಒಬ್ಬ ಮಗಳು. ನನ್ನ ಮಗಳ ಹೆಸರು ಶಶಿಕಲಾ. ವಾದಿ ನನ್ನ ಮಗಳು. ಭಾಗ ಬರಬೇಕೆಂದು ವಾದಿ ದಾವೆ ಹಾಕಿದ್ದಾರೆ. ದಾವಾ ಐಟಂ ನಂಬರ್ 1 ರ ಆಸ್ತಿಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಅದರ ಖಾತೆ ನನ್ನ ಹೆಸರಿನಲ್ಲಿದೆ. ದಾವಾ ಐಟಂ ನಂಬರ್ 2 ರ ಖಾತೆ ಭಾಗ್ಯಮ್ಮ ಎಂಬುವವರ ಹೆಸರಿನಲ್ಲಿ ಖಾತೆಯಿದೆ. ಅವರಿಗೆ ಜಮೀನು ಬರೆದುಕೊಟ್ಟು ವಾಪಸ್ಸು ಬರೆದು

ಕೊಡುತ್ತೇವೆ ಎಂದು ಹೇಳಿ ಬರೆದುಕೊಡಲಿಲ್ಲ. ನಂತರ ಅವರು ತೀರಿಹೋದರು. ದಾವಾ ಐಟಂ ನಂಬರ್ 2 ಮತ್ತು 3 ನನ್ನ ತಾತನ ಆಸ್ತಿಯಾಗಿದ್ದು ಅವರಿಂದ ನನಗೆ ಬಂದಿದೆ. ದಾವಾ ಐಟಂ ನಂಬರ್ 2 ಮತ್ತು 3 ರ ಸ್ವಾಧೀನಾನುಭವದಲ್ಲಿ ನಾವೇ ಇದ್ದೇವೆ. 2 ಮತ್ತು 3 ನೇ ಆಸ್ತಿಗಳ ಬಗ್ಗೆ ಏನು ಪತ್ರ ಬರೆದುಕೊಟ್ಟಿದ್ದೀರಿ ಎಂದರೆ ಪತ್ರ ಏನೆಂದು ಹೇಳಲಾಗುವುದಿಲ್ಲ. ಏನು ಪತ್ರ ವಾಪಸ್ಸು ಬರೆದುಕೊಡುವುದಾಗಿ ಹೇಳಿದ್ದರು ಎಂದರೆ ಸಾಲ ತೆಗೆದುಕೊಂಡಿದ್ದು, ಅದನ್ನು ತೀರಿಸುವಾಗ ವಾಪಸ್ಸು ಬರೆದುಕೊಡುತ್ತೇನೆ ಎಂದು ಹೇಳಿ ಬರೆದುಕೊಡಲಿಲ್ಲ. ದಾವಾ ಐಟಂ ನಂಬರ್ 2 ಮತ್ತು 3 ರ ಸ್ವಾಧೀನವನ್ನು ನಾವು ಬಿಟ್ಟು ಕೊಟ್ಟಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ 1/5 ಭಾಗ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿ. ನಾನು ಗಂಡು ಮಕ್ಕಳಿಗೆ ಭಾಗ ಕೊಟ್ಟಿಲ್ಲ. ಎಲ್ಲರೂ ಒಟ್ಟಿಗೆ ಇದ್ದೇವೆ. ಸರ್ವೆ ನಂಬರ್ 103 ರಲ್ಲಿ ಮನೆ ಕಟ್ಟಿಕೊಂಡಿದ್ದೇವೆ. ಅದನ್ನು ಪಂಚಾಯಿತಿ ವ್ಯಾಪ್ತಿಗೆ ಸೇರಿಸಿಲ್ಲ.ದಾವಾ ಐಟಂ ನಂಬರ್ 2 ಮತ್ತು 3 ರ ಬಗ್ಗೆ ಬರೆದುಕೊಟ್ಟ ದಾಖಲೆಗೆ ವಾದಿ ಸಹಿ ಹಾಕಿಲ್ಲ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಮಗೆ ಬೇರೆ ಆಸ್ತಿಗಳು ಇಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.